ದವರು ಆಯ್ಕೆ ಮಾಡಿದ ೧೫೦ ಜನ ವೈದ್ಯರ ಒಂದು ಆಯ್ಕೆ ಪಟ್ಟಿ ಏನಿದೆ ಅದನ್ನು ಬಿಡುಗಡೆ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.— ಲೋಕ ಸೇವಾ ಆಯೋಗದವರು ೧೫೦ ಜನ ಡಾಕ್ಟರ್ಸ್‌ನ ಒಂದು ಆಯ್ಕೆ ಪಟ್ಟಿಯನ್ನು ಆರಿಸಿ ನಮಗೆ ಕೊಟ್ಟಿದ್ದಾರೆ. ಅದಕ್ಕೆ ಆರ್ಥಿಕ ಇಲಾಖೆಯ ನಿರ್ಭಂದವಿದ್ದು ಈಗ ಅದನ್ನು ಸಡಿಲಗೊಳಿಸಿದ್ದಾರೆ. ಆದುದರಿಂದ ಅವರ ಪೋಸ್ಟಿಂಗ್‌ನ್ನು ಕೂಡಲೇ ಮಾಡಿಕೊಡುತ್ತೇವೆ.

ಇನ್ನು ೮೦೦ ಜ ಎ.ಎನ್ ಎಂ.ಗಳ ಪೋಸ್ಟಿಂಗ್‌ನ್ನು ಕೂಡ ಮಾಡುತ್ತಾ ಇದ್ದೇವೆ. ಹೀಗೆ ಪೋಸ್ಟಿಂಗ್ ಕೊಡುವಾಗ ಆಯಾಯಾ ಭಾಗಗಳಿಂದ ಬಂದಿರತಕ್ಕಂಥ ಅಭ್ಯರ್ಥಿಗಳನ್ನು ನೋಡಿ, ಅವರಿಗೆ ಅವರವರ ಪಕ್ಕದ ತಾಲ್ಲೂಕುಗಳಿಗಾದರೂ ನೇಮಕ ಮಾಡುವ ವ್ಯವಸ್ಥೆಯನ್ನು ಮಾಡುತ್ತೇವೆ. ಆಂದರೆ ಆದೇ ಜಿಲ್ಲೆಯವರಿಗೆ ಆ ಜಿಲ್ಲೆಯ ತಾಲ್ಲೂಕುಗಳಿಗೆ ಪೋಸ್ಟಿಂಗ್ ಮಾಡುವಂತೆ ಆದೇಶ ನೀಡಿದ್ದೇನೆ, ಒಂದು ತಿಂಗಳ ಕಾಲಾವಧಿಯೊಳಗಾಗಿ ಅವೆಲ್ಲಾ ಭರ್ತಿಯಾಗುತ್ತವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ಆರ್ಥಿಕ ನಿರ್ಬಂಧನೆಯು, ಆರೋಗ್ಯ, ವಿದ್ಯಾಭ್ಯಾಸ ಮತ್ತು ಪೋಲೀಸ್ ಇಲಾಖೆಗಳಿಗೆ ಅನ್ವಯಿಸುವುದಿಲ್ಲ ಎಂದು ಮಾನ್ಯ ಮುಖ್ಯಮಂತ್ರಿಗಳವರು ತಮ್ಮ ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ. ಆದರೆ ಅವರು ಹೇಳಿ ಈಗಾಗಲೇ ಮೂರು ತಿಂಗಳುಗಳು ಕಳೆದು ಹೋಗಿವೆ. ಈ ಮೂರು ಡಿಪಾರ್ಟ್‌ಮೆಂಟ್‌ಗಳು ಅವಶ್ಯಕ ಸೇವೆಗಳು ಆದುದರಿಂದ ಇವುಗಳಿಗೆ ಯಾವುದೇ ಆರ್ಥಿಕ ನಿರ್ಭಂದನೆಯು ಅನ್ವಯಿಸುವುದಿಲ್ಲ ಎಂದಿದ್ದಾರೆ. ಇದಕ್ಕೆ ತಮ್ಮ ಉತ್ತರವೇನು ?

ಶ್ರೀ ಬಿ. ರಾಚಯ್ಯ.—ಈಗ ಆರ್ಥಿಕ ನಿರ್ಭಂದನೆಯು ಇಲ್ಲ. ಲಿಸ್ಟ್ ಮಾಡಿದ್ದಾರೆ. ಒಂದು ತಿಂಗಳೊಳಗಾಗಿ ೧೫೦ ಜನ ವೈದ್ಯರು ಮತ್ತು ೮೦೦ ಜನ ಎ.ಎನ್.ಎಂ.ಗಳನ್ನು ಭರ್ತಿ ಮಾಡುವ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಬಯಸುತ್ತೇನೆ.

ಸರ್ಕಾರಿ ಹುದ್ದೆಗಳಲ್ಲಿ ಎ, ಬಿ, ಸಿ, ಡಿ, ವರ್ಗದ ಗ್ರೂಪ್‌ನಲ್ಲಿರುವ ಖಾಲಿ ಜಾಗಗಳು

೨೨೧೫. ಶ್ರೀ ಬಿ.ಹೆಚ್. ಯಂಕಾನಾಯಕ. ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ರಾಜ್ಯ ಸರ್ಕಾರದಲ್ಲಿ ಎ, ಬಿ, ಸಿ, ಡಿ ವರ್ಗಗಳಿಗೆ ಸೇರಿದ ಹುದ್ದೆಗಳೆಷ್ಟು, ಕಳೆದ ಮೂರು ವರ್ಷಗಳಿಂದ ಖಾಲಿ ಇರುವ ಹುದ್ದೆಗಳೆಷ್ಟು, (ವರ್ಗ ಮತ್ತು ವರ್ಷವಾರು ವಿವರ ನೀಡುವುದು)

(ಆ) ಕಳೆದ ಮೂರು ವರ್ಷಗಳಲ್ಲಿ ಭರ್ತಿ ಮಾಡಿರುವ ಹುದ್ದೆಗಳೆಷ್ಟು (ವರ್ಗ ಮತ್ತು ವರ್ಷವಾರು ವಿವರ ನೀಡುವುದು)

(ಇ) ಅರ್ಜಿ ಹಾಕುವ ಕನಿಷ್ಠ ವಯೋಮಿತಿ ಏರಿಸುವುದಕ್ಕೆ ಸರ್ಕಾರದವರು ಉದ್ದೇಶಿಸಿದ್ದಾರೆಯೇ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು).—

(ಅ) ೧-೧-೧೯೮೭ರಲ್ಲಿದ್ದಂತೆ ರಾಜ್ಯದಲ್ಲಿರುವ ಒಟ್ಟು ಹುದ್ದೆಗಳ ಸಂಖ್ಯೆ ಳ,೨೫,೫೮೪ ವರ್ಗವಾರು ವಿವರಗಳನ್ನು ಈ ಕೆಳಗೆ ಸೂಚಿಸಲಾಗಿದೆ.

ಗ್ರೂಪ್ 'ಎ'	೧೩,೯೯೮
ಗ್ರೂಪ್ 'ಬಿ'	೨೨,೯೬೨
ಗ್ರೂಪ್ 'ಸಿ'	೩,೯೩,೯೬೬
ಗ್ರೂಪ್ 'ಡಿ'	೧,೦೨,೯೭೮

ಲಭ್ಯವಿರುವ ಮಾಹಿತಿಯ ಪ್ರಕಾರ ಕಳೆದ ಮೂರು ವರ್ಷಗಳಿಂದ ಖಾಲಿಯಿರುವ ಹುದ್ದೆಗಳ ಬಗ್ಗೆ ವರ್ಗ ಮತ್ತು ವರ್ಷವಾರು ವಿವರಗಳನ್ನು ಈ ಕೆಳಗೆ ಸೂಚಿಸಲಾಗಿದೆ.

ವರ್ಗಗಳು	ಖಾಲಿಯಿರುವ ಹುದ್ದೆಗಳ ಸಂಖ್ಯೆ		
	ಮೂರು ವರ್ಷಗಳು	ಎರಡು ವರ್ಷಗಳು	ಒಂದು ವರ್ಷ/ ಅದಕ್ಕೂ ಕಡಿಮೆ ಅವಧಿ
ಗ್ರೂಪ್ 'ಎ'	೨೪೨	೩೨	೧೮೯
ಗ್ರೂಪ್ 'ಬಿ'	೬೩೬	೯೫	೪೧೦
ಗ್ರೂಪ್ 'ಸಿ'	೧೫,೬೪೩	೩,೮೨೧	೪೬೩೨
ಗ್ರೂಪ್ 'ಡಿ'	೨,೭೩೯	೮೩೦	೩೪೩೧

(ಆ) ೧೯೮೫ರಿಂದ ಭರ್ತಿ ಮಾಡಿರುವ ಹುದ್ದೆಗಳ ಬಗ್ಗೆ ವರ್ಷವಾರು ವಿವರಗಳು ಈ ಕೆಳಕಂಡಂತಿವೆ.

೧೯೮೫-೮೬	೩೦,೧೫೪
೧೯೮೬-೮೭	೧೦,೧೦೨
೧೯೮೭-೮೮	೬,೭೫೭

(ವರ್ಗವಾರು ವಿವರಗಳು ಲಭ್ಯವಿಲ್ಲ)

(ಇ) ಇಲ್ಲ.

ಶ್ರೀ ಬಿ. ಎಸ್. ಯಂಕಾನಾಯಕ್.—ಮಾನ್ಯ ಮುಖ್ಯಮಂತ್ರಿಗಾರವರು ಒಟ್ಟು ಹುದ್ದೆಗಳ ಸಂಖ್ಯೆ ಮತ್ತು ವರ್ಗವಾರು ವಿವರಗಳನ್ನು ಹೇಳಿದ್ದಾರೆ. ಇನ್ನೂ ಖಾಲಿಯಿರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡುತ್ತೀರಿ ? ಇದರಲ್ಲಿ ಎಷ್ಟು ಜನ ಎಸ್.ಸಿ. ಮತ್ತು ಎಸ್.ಟಿ. ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ ಎಂದು ದಯವಿಟ್ಟು ತಿಳಿಸಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ನಮ್ಮ ಸರಕಾರ ಅಸ್ತಿತ್ವಕ್ಕೆ ಬಂದ ಮೇಲೆ ಒಟ್ಟು ೬೫ ಸಾವಿರ ವಿವಿಧ ವರ್ಗಗಳ ಹುದ್ದೆಗಳನ್ನು ಭರ್ತಿ ಮಾಡಿದ್ದೇವೆ. ಅದರಲ್ಲಿ ಪರಿಶಿಷ್ಟ ಜಾತಿ ಮತ್ತು ಜನಾಂಗ ದವರಿಗೆ ರಾಜ್ಯಾಂಗ ಪ್ರಕಾರ ಮತ್ತು ಕಾನೂನಿನ ಪ್ರಕಾರ ಎಷ್ಟು ಹುದ್ದೆಗಳು ಹೋಗಬೇಕಾಗಿತ್ತೋ ಅಷ್ಟು ಹುದ್ದೆಗಳನ್ನು ಅವರಿಗೆ ಕೊಟ್ಟಿದ್ದೇವೆ.

ಚುಕ್ಕೆ ಗುರುತಿನ ಪ್ರಶ್ನೆ ಕ್ರಮಾಂಕ ೬೪೭ ಮಾನ್ಯ ಸದಸ್ಯರು ಗೈರುಹಾಜರಿ.

ಹೆಗ್ಗಡದೇವನಕೋಟೆಯಲ್ಲಿ ಜನರಲ್ ಆಸ್ಪತ್ರೆ ಕಟ್ಟಡ

೧೬೪೪. ಶ್ರೀ ಎಂ. ಶಿವಣ್ಣ (ಹೆಗ್ಗಡದೇವನಕೋಟೆ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಹೆಗ್ಗಡದೇವನಕೋಟೆಯಲ್ಲಿ ಜನರಲ್ ಆಸ್ಪತ್ರೆಯ ಕಟ್ಟಡವನ್ನು ಕಟ್ಟಲಾಗುತ್ತಿದೆಯೇ ?

(ಆ) ಹಾಗಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಯಿತು; ಇದಕ್ಕೆ ತಗುಲಿರುವ ವೆಚ್ಚವೆಷ್ಟು ?

(ಇ) ಸದರಿ ಕಟ್ಟಡದ ಕಾಮಗಾರಿಯು ವಿಳಂಬವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

(ಈ) ಹಾಗಿದ್ದಲ್ಲಿ, ಇದನ್ನು ಪೂರ್ಣಗೊಳಿಸುವುದಕ್ಕೆ ಸರ್ಕಾರ ಕೈಗೊಂಡ ಕ್ರಮಗಳು ಏನು ?